ಒ ಎಸ್ 48/2014 ಡಿ.ಡಬ್ಲ್ಯೂ:2

ಇಂದು ದಿ: 21.04.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದ:

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿದ್ದು ಅದರಲ್ಲಿ ಸಾಕ್ಷಿದಾರರ ಸಮಕ್ಷಮ ಆರ್ ಟಿ ಸಿ ಯನ್ನು ಇಂಡೀಕರಣ ಮಾಡಬೇಕು ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಮಾದಮ್ಮನನ್ನು ಕರೆದುಕೊಂಡು ಬಂದು ಸರ್ವೆ ಮಾಡಿ ಇಂಡೀಕರಣ ಮಾಡಿದ್ದಾರೆ ಎಂದು ನನ್ನ ತಂದೆ ಹೇಳುತ್ತಿದ್ದರು. ಮಾದಮ್ಮನನ್ನು ಕರೆದುಕೊಂಡು ಬಂದು ಮಾಡಿರುವ ಇಂಡೀಕರಣ ದಾಖಲೆ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಇಂಡೀಕರಣ ಆದ ಬಗ್ಗೆ ನಮೂದು ಇದೆಯೇ ಎಂದು ನನಗೆ ಗೊತ್ತಿಲ್ಲ. ಇನ್ನು ಕೆಲವರನ್ನು ಪಾರ್ಟಿ ಮಾಡಬೇಕೆಂದು ದಾಖಲೆಯಲ್ಲಿ ಇದೆ, ಆದರೆ ಯಾರನ್ನು ಪಾರ್ಟಿದಾರರನ್ನಾಗಿ ಮಾಡಬೇಕು ಎಂದ ನನಗೆ ಗೊತ್ತಿಲ್ಲ. ಇನ್ನು ಹಲವಾರು ಆಸ್ತಿಗಳು ಸೇರಿಸಲು ಬಾಕಿ ಇವೆ ಆದರೆ ಅವುಗಳ ಸರ್ವೆ ನಂಬರ್ ಗಳು ಗೊತ್ತಿಲ್ಲ. ಸಿದ್ದಮ್ಮ ನನ್ನ ಸಂಬಂದಿಕರು ಎನ್ನುವ ಬಗ್ಗೆ ದಾಖಲೆ ಇಲ್ಲ.

ಮಂಡಕಳ್ಳಿ ಗ್ರಾಮವು ನಮ್ಮ ಊರಿನಿಂದ 6-7 ಕಿ.ಮೀ ದೂರದಲ್ಲಿ ಇದೆ. ಆ ಊರಿಗೆ ನಾನು ಯಾವತ್ತೂ ಹೋಗಿಲ್ಲ. ಅಲ್ಲಿ ನನ್ನ ಸಂಬಂಧಿಕರು ಸಹ ಯಾರು ಇಲ್ಲ. ಆರ್ ಆರ್ ಟಿ ಪ್ರಕರಣ ದಾಖಲಾಗಿತ್ತು ಎನ್ನುವ ಬಗ್ಗೆ ಆರ್ ಟಿ ಸಿ ಯನ್ನು ಹಾಜರುಪಡಿಸಿದ್ದೇನೆ. ವಾದಿಗಳು ಹಾಜರುಪಡಿಸಿರುವ ನಿಪಿ 26 ರಿಂದ 33 ರ ನೈಜತೆಯ ಬಗ್ಗೆ ಯಾವುದಾದರೂ ಕಛೇರಿಗೆ ಹೋಗಿ ಪರಿಶೀಲನೆ ಮಾಡಿಲ್ಲ. ವಾದಿಗಳು ಮಾದಮ್ಮನ ವಾರಸುದಾರರೆಂದು ನಾನು ಒಪ್ಪಿಕೊಂಡರೆ ಆಸ್ತಿ ಕೈ ತಪ್ಪಿಹೋಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.